ನಾನು, ಜಯಂತ ಕಾಯ್ಕಿಣಿ, ರವಿ ಬೆಳಗೆರೆ ಪೈಪೋಟಿ ಎನ್ನುವಂತೆ ಕಥೆ ಬರೆಯುತ್ತಿದ್ದ, ಕಥೆಗಾರನಾಗಿ ಸ್ಟಾರ್‌ಗಿರಿ ಇದ್ದ ದಿನಗಳವು. ಪೋಸ್ಟ್‌ಮ್ಯಾನ್ ಪ್ರತಿದಿನ ಲಗ್ಗೇಜ್ ರೀತಿ ಓದುಗರ ಪತ್ರಗಳನ್ನು ತಂದುಕೊಡುತ್ತಿದ್ದ. ಈಗ ಓದುಗರ ಸಂಖ್ಯೆಯನ್ನು ನೆನಪಿಸಿಕೊಂಡರೆ ಆತಂಕವಾಗುತ್ತದೆ.

ನಾನು ಕೆಪಿಎಸ್‌ಸಿ ಪರೀಕ್ಷೆ ಬರೆದಿದ್ದೆ. ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಗುಮಾಸ್ತನ ಕೆಲಸ ಸಿಕ್ಕಿತು. ನನ್ನ ಹೆಂಡತಿಗೆ ಭೌತಶಾಸ್ತ್ರದಲ್ಲಿ ಪಾರ್ಟ್ ಟೈಂ ಲೆಕ್ಚರರ್ ಕೆಲಸ ಸಿಕ್ಕಿತು. ನನಗೆ ಕೋರ್ಟ್‌ನಲ್ಲಿ ಬೆಂಚ್ ಕ್ಲರ್ಕ್ ಕೆಲಸ ಕೊಟ್ಟರು. ನಾನು ಬೇಡ ಎಂದೆ. ಜನರೇ ಇಲ್ಲದ ಜಾಗ ಕೇಳಿಕೊಂಡೆ. ರೆಕಾರ್ಡ್ ರೂಂ ಕೊಟ್ಟರು. ಮನುಷ್ಯರು ಹೆಚ್ಚು ಸುಳಿದಾಡದ, ಕಡತಗಳೇ ತುಂಬಿದ್ದ ಆ ಕೊಠಡಿಯಲ್ಲಿ ಕಥೆ ಬರೆಯಲು ಬಿಡುವು ದೊರೆಯುತ್ತಿತ್ತು. ಅದೇ ವೇಳೆಗೆ ‘ಲಂಕೇಶ್ ಪತ್ರಿಕೆ’ ಶುರುವಾಯಿತು. ಪುಟ್ಟದೊಂದು ಅಂಕಣ ಬರೆಯತೊಡಗಿದೆ. ಕಾಲೇಜುಗಳಲ್ಲಿ ಉಪನ್ಯಾಸಕ ಹುದ್ದೆಗಾಗಿ ಪ್ರಯತ್ನಿಸತೊಡಗಿದಂತೆ ನಾನು ಪಡೆದ ಚಿನ್ನದ ಪದಕಗಳು ವ್ಯರ್ಥ ಎನ್ನುವುದು ಅರ್ಥವಾಯಿತು.

ಮೇಷ್ಟ್ರಾಗುವ ಕನಸು ಕೈಗೂಡದಿದ್ದರೂ ನನ್ನ ಕಥೆಗಳಿಗೆ ಓದುಗರಿಂದ ದೊರೆಯುತ್ತಿದ್ದ ಸ್ಪಂದನ ಖುಷಿಕೊಡುತ್ತಿತ್ತು. ಸಿನಿಮಾ ನಿರ್ದೇಶಕರು ಕೂಡ ಆಸಕ್ತಿ ವ್ಯಕ್ತಪಡಿಸುತ್ತಿದ್ದರು. ಈ ಸಿನಿಮಾ ಸಹವಾಸದಲ್ಲಿ ನಟ, ಅಧ್ಯಾಪಕ ಮಾನು ಅವರ ಪರಿಚಯವಾಯಿತು. ನನ್ನ ಉಪನ್ಯಾಸಕನಾಗುವ ಆಸೆ ಅವರಿಗೆ ತಿಳಿಯಿತು. ಸಂಜೆ ಕಾಲೇಜೊಂದರಲ್ಲಿ ತಾತ್ಕಾಲಿಕ ಹುದ್ದೆ ಇತ್ತು. ಕೋರ್ಟ್‌ನಲ್ಲಿನ ನನ್ನ ಸೀನಿಯರ್‌ಗಳು ಕೂಡ ಅನುಮತಿ ಕೊಟ್ಟರು. ಬೆಳಗ್ಗೆ ಕೋರ್ಟ್, ಸಂಜೆ ಕಾಲೇಜು – ಒಂದು ವರ್ಷ ಹೀಗೇ ಎರಡೂ ಕೆಲಸ ಮಾಡುತ್ತಿರುವಾಗ, ಅದೇ ಕಾಲೇಜಿನಲ್ಲಿ ಹಗಲು ಕಾಲೇಜಿನ ಉಪನ್ಯಾಸಕ ಹುದ್ದೆಯೊಂದಕ್ಕೆ ಅರ್ಜಿ ಕರೆದರು. ನನ್ನ ಪರವಾಗಿ ಮಾನು ವಕೀಲಿಕೆ ಮಾಡಿದ್ದರಿಂದಾಗಿ ಕೆಲಸ ದೊರೆಯಿತು. ಕೋರ್ಟ್ ಬಿಟ್ಟೆ. ಉಪನ್ಯಾಸಕನಾಗಿ 12 ವರ್ಷ ಕೆಲಸ ಮಾಡಿದೆ. ಆನಂತರ ದೃಶ್ಯಮಾಧ್ಯಮದಲ್ಲಿ ಎಷ್ಟು ಕೆಲಸ ದೊರಕಿತು ಎಂದರೆ, ನನ್ನ ಪ್ರೀತಿಯ ಉಪನ್ಯಾಸಕ ಹುದ್ದೆಯನ್ನು ಬಿಡಬೇಕಾಯಿತು.

**ಸಾಹಿತ್ಯದ ಕಣ್ಣಿನಿಂದ ಸಿನಿಮಾ ಮಾಡುವ ಚೌಕಟ್ಟನ್ನು ನಮ್ಮ ಬಹುತೇಕ ಲೇಖಕರು ಮೀರಲಿಲ್ಲ. ನನ್ನ ಅನುಭವದಂತೆ, ಅನೇಕ ಸಾಹಿತಿಗಳಿಗೆ ಸಿನಿಮಾ ಬಗ್ಗೆ ಗುಪ್ತಪ್ರೀತಿ ಇರುತ್ತದೆ; ಜೊತೆಗೆ ಅಸ್ಪೃಶ್ಯ ಮನೋಭಾವವೂ ಇರುತ್ತದೆ. ಸಿನಿಮಾಕ್ಕೆ ಕೆಲಸ ಮಾಡುವುದು ಕವಿತೆಯನ್ನೋ ಕಥೆಯನ್ನೋ ಬರೆದಂತಲ್ಲ...**

- **ಆಮೇಲೆ ನೀವು ಪೂರ್ಣ ಪ್ರಮಾಣದ ನಿರ್ದೇಶಕರಾದಿರಿ. ನೀವು ನಿರ್ದೇಶಕನಾದ ಕಥೆ ಹೇಳಿ.**

‘ಅಮೆರಿಕ ಅಮೆರಿಕ’, ‘ಹೂಮಳೆ’ ಚಿತ್ರಗಳನ್ನು ಉಪನ್ಯಾಸಕನಾಗಿದ್ದಾಗ ರಜೆ